Sri A. R. BADARINARAYANA (Minister for Education).—

No. The powers of transfer of Primary School Teachers vest with the Deputy Directors of Public Instruction of the district concerned in so far as the transfer is within the district. In case of Inter District transfer the Joint Director of Public Instruction has power to issue permission and the transfers are effected by the Deputy Directors of Public Instruction concerned.

As regards transfer of Graduate Teachers, the power vest in the Deputy Director of Public Instruction and Joint Director of Public Instruction within their respective jurisdictions. However, Inter-Division transfers when effected are to be approved by the Director of Public Instruction and orders given effect to by the concerned Joint Directors of Public Instruction.

Calling attention to a matter of Urgent Public Importance *re*:—**Situation created in Bellary District due to acute shortage of nitrogenous fertilisers.**

ಶ್ರೀ ಬಿ. ಇ. ರಾಮಯ್ಯ (ಸಿರಗುಪ್ಪ).—ಶ್ರೀ ನತ್ಯನಾರಾಯಣ ಸಿಂಗ್ ಅವರು ಹಾಲಿ ಸಭೆಯಲ್ಲಿ ಇಲ್ಲದಿರುವುದರಿಂದ ಇದು ಬಹಳ ಪ್ರಾಮುಖ್ಯವಾದ ವಿಷಯವಾದ್ದರಿಂದ ರೈತರಿಗೆ ನಮ್ಮ ಬಳ್ಳಾರಿ ಜಿಲ್ಲೆಗೆ ಗೊಬ್ಬರವನ್ನು ಒದಗಿಸತಕ್ಕ ಬಗ್ಗೆ ಸರ್ಕಾರದವರು ಕೈಗೊಂಡಿರತಕ್ಕ ಕಾರ್ಯಕ್ರಮಗಳೇನೆಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

Sri S. M. KRISHNA (Minister for Industries).—Sir on behalf of the Hon. Minister for Agriculture and Forests. I beg to state as follows:—

After the decontrol of fertilisers manufactured in India, according to the Policy laid down by the Government of India since 1969, the indigenous manufacturers are permitted to sell the fertilisers manufactured by them in any manner they like. There are three agencies that are distributing fertilisers in Mysore State and they are co-operative societies, The Mysore State Agro-Indu tries Corporation and the Private dealers. The fertiliser requirements of the State are worked out in the Zonal Conferences convened by the Government of India once in six months. These Zonal Conferences are being attended by the representative of the manufacturers, State Governments and Government of India. At these Conferences the programmes of supply by the manufacturers is finalised and the Government of India takes up the responsibility of supplying only the balance quantities needed by the State through imports under the pool.

The programme of distribution for Mysore State for Khariff 1972 is to supply N-60,000, P-35,000 and K-20,000 tonnes. As against this, the different manufacturers have agreed to supply N-35,0 0, P-26,270 and K-15,000 tonnes of fertilisers to the State. The Government of

India has agreed to supply N–17,250 tonnes only in the form of straight nitrogenous fertilisers and complex fertilisers where P and K components are also contained.

The present policy of the Government of India as well as the State Government is to make available the Plant Nutrients mostly in the form of complex fertilisers N.P.K. 15 : 15 : 15 : (Sulphala), 17 : 17 : 17 : (Madras Fertilisers), 28 : 28 : 0 : (Grow more), 20 : 20 : 0 (Grow more), 18 : 46 : 0 (Diamophosphate), 14 : 14 : 14, 14 : 28 : 24, 12 : 24: 12 *etc.*, and small quantities in the form of straight nitrogenous fertilisers for top dressing of crops. This s done with a view to encourage the farmers to adopt balanced application of fertilisers in the interest of Agricultural production and also avoid malpractices in the supply of fertilisers.

A meeting of the manufacturers and others was convened by the Government on 8th June 1972 to review the plans drawn up in the recent Zonal Conference held on 5th May 1972. It is found that all the manufacturers except FACT have been supplying fertilisers as per the programme drawn up in the Zonal Conference. Only FACT has not been able to supply on account of the strike in the factory for the past 1 month. Since the manufacturers represented that they would be in a position to supply more fertilisers in case the Railway waggons are made available for the movement of stocks, the Government has taken necessary steps in the matter and moved with the Railway Minister, Chairman Railway Board and the General Manager, Southern Railways.

To expedite the despatch of Pool fertilisers from Madras, the Government had deputed the Deputy Director of Agriculture (Development) to Madras. As a result of his visit, the Railways have provided necessary waggon facilities for the movement of pool fertilisers from Madras and Nagapatnam Ports. The stocks have begum moving to Mysore State since the first week of June.

The State had a stock of 72,000 tonnes of fertilisers in the beginning of June in the form of straight Nitrogenous fertilisers and complex fertilisers (N. P. K.) Statement enclosed. There is no general shortage of fertilisers. Fertilisers are available in the form of complex fertilisers and the shortage is in respect of specific fertilisers such as Ammonium Sulphate and Urea for the time being. Farmers are being advised through Radio and other media to go in for more and more of complex types of fertilisers available in Mysore State and are discouraged to use only nitrogenous fertilisers. The Nitrogenous fertilisers available at present are distributed judiciously through permit system, so that stocks may not be cornered by the affluent farmers only but may be equitably distributed.

Details of stocks allotted, and stocks received under the pool from January 1972 upto 30th June 1972 are furnished herewith. Further allotments are expedited.

STOCKS RELEASED FOR MYSORE STATE

January—March 1972

Ministry's allotment No. 1-92/71-M, dated 31-12-1971

Commodity	Quantity allotted	Quantity released	Pending for want of stock.
Urea ...	10,000	768	9,232
Ammonium Sulphate ...	10,000	10,000	...
C. A. N. ...	10,000	10,000	...

April—June 1972

Ministry's allotment No. 1-6/72-MD. dated 3-6-1972

Ammonium Sulphate		5,000	...	5,000
Urea	...	9,000	...	9,000
C. A. N.	...	10,000	10,000	Stocks under movement.
N. P. K.	...	9,192	9,192	Arrangements are made by the Railways to allot waggons for movement of fertilisers.

Statement Showing the Details of Receipts Distribution and Closing Stock of Fertilisers for the Month of May,—1972.

Sl. No.	Name of Fertilisers	Opening balance	Receipt	Distribution	Closing balance as on 1-6-1972
	I. Distribution by M. S. C. M. F. Ltd.				
1	Ammonium Sulphate ...	3,548	...	1,990	1,558
2	Urea ...	2,045	1,251	1,444	1,852
3	Cal. Ammonium Nitrate ...	9,258	920	1,750	8,428
4	Ammonium Phosphate ...	2,887	...	113	2,774
5	Diammonium Phosphate ...	6,142	...	779	5,363
6	Ammonium Chloride ...	955	...	...	955
7	Basic Slag ...	342	...	80	262
8	Ammonium Sulphate Nitrate...	218	...	3	215
9	Muriate of Potash ...	4,390	...	132	4,258
10	Oxfam ...	2,138	...	160	1,978
11	NPK 14 : 14 : 14 ...	241	...	1	240
12	NPK 15 : 15 : 15 ...	536	300	886	150
13	NPK 14 : 28 : 14 ...	177	440	292	325
14	NPK 12 : 24 : 12 ...	18	50	45	23
15	Mixture ...	170	1,000	1,005	165
16	Super Phosphate ...	147	...	...	147
		33,212	3,961	8,459	28,714

(SRI S. M. KRISHNA)

II. Distribution by M. S. A. I. C., Ltd. and Private Agencies.

1	Ammonium Sulphate	...	5,707	2,752	2,891	5,568
2	Urea	...	3,292	2,549	2,409	3,432
3	Nitrate Cal. Ammo.	...	9,715	1,186	3,251	7,644
4	Ammo. Sul. Nitrate	...	499	...	40	459
5	Ammonium Chloride	...	24	...	...	24
6	Ammonium Phosphate	...	8,933	1,647	1,481	9,099
7	Di-ammonium Phosphate	...	1,497	157	834	820
8	Euriate of Potash	...	4,017	1,629	1,892	3,764
9	Mixtures	...	2,823	9,704	8,902	3,625
10	Super Phosphate	...	8,015	9,486	7,017	10,484
11	Complex	...	656	5,785	4,888	533
12	Sulphala	...	844	2,296	2,021	1,119
			46,072	33,191	35,626	44,637

Abstract:

1	Distn. by MSCMF. Ltd.,	8,459
2	Distn. by MSSIC. Ltd., and Private Agencies	35,626
	Total ...	44,085

ಶ್ರೀ ಬಿ. ಇ. ರಾಮಯ್ಯ.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಸಭೆಯಲ್ಲಿ ಹೇಳಿಕೆ ಕೊಟ್ಟ ಸ್ಪೀಚ್ ಮೆಂಟಿನ ಕಾಪಿ ನಮಗಿನ್ನೂ ಸಪ್ಲೈಯಾಗಿಲ್ಲ. ಅದು ಬಹಳ ಪ್ರಾಮುಖ್ಯವಾದದ್ದು. ಅದನ್ನು ಓದಿಸುವುದಕ್ಕೆ ಅಪ್ಪಣೆಯಾಗಬೇಕು. ನಮ್ಮಲ್ಲಿ ಎರಡು ಲಕ್ಷ ಎಕರೆ ತರೀ ಜಮೀನಿರುತ್ತೆ. ಅಲ್ಲಿಯ ರೈತರ ತೊಂದರೆ ನಿವಾರಣೆಗಾಗಿ ಸರ್ಕಾರದವರು ಏನು ತ್ವರಿತ ಕ್ರಮ ಕೈಗೊಂಡಿದ್ದಾರೆ?

† ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಸದಸ್ಯರು ಮತ್ತು ಇನ್ನೂ ಕೆಲವು ಸದಸ್ಯರು ಇದರ ಕಡೆಗೆ ಸರ್ಕಾರದವರ ಗಮನಪನ್ನು ಸಾಕಷ್ಟು ಸೆಳೆದಿದ್ದಾರೆ. ಅದಕ್ಕಾಗಿ ಮದ್ರಾಸ್ ಮತ್ತು ನಾಗಪಟ್ಟಣಗಳಿಂದ ಹಾರ್ಬರಿನಿಂದ ಫರ್ಟಿಲೈಜರನ್ನು ತರಿಸುವುದಕ್ಕೆ ತಕ್ಕ ವ್ಯವಸ್ಥೆಯನ್ನು

ಮಾಡಲಾಗಿದೆ. ಇಲ್ಲಿಯವರೆಗೂ ನಮಗೆ ರೈಲ್ವೆ ವ್ಯಾಗನ್‌ಗಳ ಕಷ್ಟವಿತ್ತು. ಈಗ ಅದರ ಬಗ್ಗೆ ಮಾನ್ಯ ಕೇಂದ್ರದ ರೈಲ್ವೆ ಮಂತ್ರಿಗಳನ್ನೂ ಮತ್ತು ರೈಲ್ವೆ ಬೋರ್ಡಿನವರನ್ನೂ ಮತ್ತು ರೈಲ್ವೆ ಜನರಲ್ ಮೇನೇಜರನ್ನೂ ಕಂಡು ತಕ್ಕ ವ್ಯವಸ್ಥೆ ಮಾಡಲಾಗಿದೆ.

2-00 P. M.

ಶ್ರೀ ಬಿ. ಇ. ರಾಮಯ್ಯ.—ಈಗ ಗೊಬ್ಬರವನ್ನು ಯಾವಾಗ ಮತ್ತು ಹೇಗೆ ಸರಬರಾಯಿ ಮಾಡುವಿರಿ ?

ಶ್ರೀ ಎಸ್. ಎಂ. ಕೃಷ್ಣ.—ಸ್ಟೇಟ್ ಮಾರ್ಕೆಟಿಂಗ್ ಫೆಡರೇಷನ್ನಿಗೆ ಮತ್ತು ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿಗೆ ಕೊಡಲಾಗಿದೆ. ಅವರು ಎಲ್ಲಾ ಕಡೆಗೂ ಒದಗಿಸುವರು.

ಶ್ರೀ ವಿ. ನಾಗಪ್ಪ.—ಬಳ್ಳಾರಿ ಜಿಲ್ಲೆಗೆ ಸಾಕಷ್ಟು ಒದಗಿಸಬೇಕು. ಮದ್ರಾಸಿನಿಂದ ಬರಬೇಕಾಗಿರುವುದನ್ನು ಬೇಗ ತರಿಸಿ ಕೊಡಬೇಕು. ಕೆಲವು ಕಡೆ ಬ್ಲಾಕ್ ಮಾರ್ಕೆಟ್ಟಿನಲ್ಲಿ ಮಾರಾಟವಾಗುವುದನ್ನು ನಿಲ್ಲಿಸಲು ಸಾಧ್ಯವಿಲ್ಲವೆ ?

ಶ್ರೀ ಎಸ್. ಎಂ. ಕೃಷ್ಣ. -ಎಲ್ಲಾ ಜಿಲ್ಲೆಗಳಿಗೂ ಬೇಕಾಗಿರುವುದನ್ನು ಸಾಧ್ಯವಾದಷ್ಟು ಸರಬರಾಯಿ ಮಾಡಬೇಕೆಂಬುದೇ ಸರಕಾರದ ಉದ್ದೇಶ. ಬ್ಲಾಕ್ ಮಾರ್ಕೆಟ್ ಇರುವುದು ಗಮನಕ್ಕೆ ಬಂದರೆ ಸಂಬಂಧಪಟ್ಟವರಿಗೆ ಉಗ್ರ ಶಿಕ್ಷೆ ಮಾಡುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ಈಗ ಸರಕಾರದಲ್ಲಿ ಒಂದು ನೀತಿ ಇದೆ, ಅದರ ಪ್ರಕಾರ ಕೋ-ಆಪರೇಟಿವ್ ಸೊಸೈಟಿ ಮೂಲಕ, ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮೂಲಕ ಹಂಚುತ್ತೀರಿ. ಈಗ ಖಾಸಗಿಯವರು ಹಂಚುವಾಗ ಬ್ಲಾಕ್ ಮಾರ್ಕೆಟ್ ಮಾಡಿದರೆ ಶಿಕ್ಷೆ ಅವರಿಗೆ ಮಾಡಲು ಕಾನೂನಿನಲ್ಲಿ ಅಡಚಣೆ ಇದೆ ಎಂದು ಗೊತ್ತಾಗಿದೆ. ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನವರು ರಿಜಿಸ್ಟರ್ಡ್ ಏಜೆಂಟ್ಸ್ ಇಟ್ಟುಕೊಂಡಿದ್ದಾರೆ. ಆ ಏಜೆಂಟರು ಅಪವ್ಯಯ ಮಾಡಿದರೆ ಅವರನ್ನು ಶಿಕ್ಷೆಸಲು ಕಾನೂನಿನಲ್ಲಿ ಅವಕಾಶವಿಲ್ಲ. ಆದುದರಿಂದ ಏನೇ ಸುಧಾರಣೆ ಮಾಡಿದರೂ ಕೂಡ ಅಪವ್ಯಯವಾಗಲು ಅವಕಾಶವಿದೆ. ಆದುದರಿಂದ ಇದನ್ನು ಆಲೋಚನೆ ಮಾಡಿ ಯಾರೇ ಅಪವ್ಯಯ ಮಾಡಿದರೂ ಕೂಡ ಅವರನ್ನು ಶಿಕ್ಷಿಸಲು ಅವಕಾಶಮಾಡಿಕೊಳ್ಳುವುದು ಸಾಧುವಲ್ಲವೇ ?

ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಗಳು).—ತಾವು ಪಿ.ಎ.ಸಿ. ಛೇರ್ಮನ್ನರಾಗಿದ್ದೀರಿ. ಈ ವಿಚಾರ ಗಮನಿಸಿ ಇಂಟರಿಂ ರಿಪೋರ್ಟ್ ಕೊಟ್ಟರೂ ಕೂಡ ಅದಕ್ಕೆ ತೀವ್ರ ಗಮನ ಕೊಡುತ್ತೇವೆ. ಆದರೆ ಈ ಸಂದರ್ಭದಲ್ಲಿ ಒಂದು ವಿಚಾರ ಸಭೆಯ ಗಮನಕ್ಕೆ ತರುವುದು ಈಗ ಗೊಬ್ಬರ ಎರಡು ರೀತಿಯಲ್ಲಿ ಹಂಚಲಾಗುತ್ತಿದೆ, ಪ್ರೈವೇಟ್ ಏಜೆಂಟರ ಮೂಲಕ ಮತ್ತು ಕಾರ್ಪೊರೇಷನ್ ಏಜೆಂಟರ್ ಮೂಲಕ. ಸರಕಾರಕ್ಕೆ ಕೆಲವು ಭಾಗ ಬರುವುದು ಮತ್ತು ನೇರವಾಗಿ ತಯಾರಿಸುವವರೇ ಬೇರೆ ಹಂಚುವರು. ಅದರಮೇಲೆ ನಮ್ಮ ಹತೋಟಿ ಇಲ್ಲ. ನಮಗೆ ಬರುವುದನ್ನು ಪ್ರೈವೇಟ್ ಏಜೆನ್ಸಿಗಳಿಗೆ ಕೊಡುವುದನ್ನು ತಪ್ಪಿಸಿ ಪೂರ್ಣವಾಗಿ ಕೋಆಪರೇಟಿವ್ ಸೊಸೈಟಿಗಳಿಗೇ ಕೊಡಬಹುದು, ಅದಕ್ಕೆ ಆಭ್ಯಂತರವಿಲ್ಲ. ಆದರೆ ಅದು ಕೂಡ ಫೈರ್ ಪ್ರೂಫ್ ಆಗಿದೆ ಎಂಬುದರಲ್ಲಿ ಅನುಮಾನವಿದೆ. ಎಷ್ಟೋ ಸಂದರ್ಭಗಳಲ್ಲಿ ಖಚಿತವಾಗಿ ಉದಾಹರಣೆ ಕೊಡಲು ಆಗದಿದ್ದರೂ ನಮ್ಮ ಅನುಭವದ ಪ್ರಕಾರ ಈ ವಿಚಾರದಲ್ಲಿ ಅನುಮಾನವಿದೆ. ಕೋ-ಆಪರೇಟಿವ್ಸ್‌ನವರೂ ಕೂಡ ಪ್ರೈವೇಟಾಗಿ ಮಾರಾಟಮಾಡಿರುವುದುಂಟು. ಕೆಲವು ಸಂದರ್ಭಗಳಲ್ಲಿ ಅಭಾವವಿರುವಾಗ ಉಪ್ಪು, ಯೂರಿಯ ಬರುತ್ತದೆ ಯೂರಿಯಕ್ಕೆ ಡಿಮ್ಯಾಂಡ್ ಬಹಳವಿರುತ್ತದೆ. ಅದನ್ನು ಇಲ್ಲಿಟ್ ಡಿಸ್ಟ್ರಿಬ್ಯೂಷನ್ನಿಗೆ ಮುಂತಾದುವಕ್ಕೂ ಉಪಯೋಗಿಸುವರು. ಹೀಗಿರುವಾಗ ಇವಕ್ಕೆ ಯಾವಾಗಲೂ ಡಿಮ್ಯಾಂಡ್ ಇರುವುದು. ಇದನ್ನು ಗಮನಿಸಬೇಕು. ಇಲಾಖೆಯಿಂದ ಹಂಚುವುದನ್ನು ಹಿಂದೆ ಬೇಡವೆಂದರು. ಆಗ ಕೋ-ಆಪರೇಟಿವ್ಸ್‌ಗೆ ಕೊಡರಾಯ್ತು. ಅದು ಹಳೆಯ ಪದ್ಧತಿ, ಅದಿದೆ. ಒಟ್ಟಿನಲ್ಲಿ ಗೊಬ್ಬರ ಹೆಚ್ಚಾಗಿಲ್ಲದೆ ಅಭಾವವಾಗಿರುವುದರಿಂದ ತೊಂದರೆಯಾಗಿದೆ. ಆದರೂ ಇದಕ್ಕೆ ಗಮನಕೊಟ್ಟು ಸರಿಯಾದ ವ್ಯವಸ್ಥೆ ಮಾಡಬೇಕು. ಅದು ಅಗತ್ಯ. ಅದಕ್ಕೆ ಪ್ರಯತ್ನಮಾಡೋಣ.

ಶ್ರೀ ಕೆ. ಎಚ್. ಹನುಮೇಗೌಡ.—ಹಾಸನ ಜಿಲ್ಲೆಯಲ್ಲಿ ಸುಮಾರು 20 ಸಾವಿರ ಎಕರೆಯಲ್ಲಿ ಹುಲ್ಲು ಬೆಳೆದಿದೆ, ಗೊಬ್ಬರ ಕೊಡದಿದ್ದರೆ ಬೆಳೆ ಹಾಳಾಗುವುದು. ಎಂಟು ಹತ್ತು ದಿವಸಗಳಿಂದ ಅನೇಕ ಅರ್ಜಿ ಕೊಟ್ಟರೂ ರೈತರಿಗೆ ಒಂದು ಟನ್ ಗೊಬ್ಬರ ಸಿಕ್ಕಿಲ್ಲ. ಹೆಚ್ಚು ಹಣ ಕೊಟ್ಟರೆ ಬ್ಲಾಕ್ ಮಾರ್ಕೆಟ್ಟಿನಲ್ಲಿ ಸಿಕ್ಕುವುದು. ಆದುದರಿಂದ ಹಾಸನ ತಾಲ್ಲೂಕಿಗೆ ಬೆಳೆಗೆ ಅನುಕೂಲವಾಗುವಂತೆ ತಕ್ಷಣ ಗೊಬ್ಬರ ಒದಗಿಸುವಿರಾ ?

ಶ್ರೀ ಡಿ. ದೇವರಾಜ ಅರಸ್.—ಅದನ್ನು ಗಮನಿಸೋಣ. ಗೊಬ್ಬರ ತಯಾರು ಮಾಡುವವರು ಅವರ ಏಜೆಂಟರ ಮೂಲಕ ಕೊಡುವರು. ಸಾಕಷ್ಟು ಗೊಬ್ಬರ ನಮ್ಮ ಹತ್ತಿರವಿಲ್ಲ. ಈಗ ವಿಶೇಷ ಪರಿಸ್ಥಿತಿ ಇದೆ. ಮಾನ್ಯ ಸದಸ್ಯರು ಹೇಳುವುದನ್ನು ಗಮನಿಸಿ ಹಾಸನಕ್ಕೆ ಒದಗಿಸಲು ಪ್ರಯತ್ನ ಮಾಡೋಣ.

ಶ್ರೀ ಕೆ. ಎಫ್. ಪಾಟೀಲ್.—ಗೊಬ್ಬರ ತಯಾರಿಸುವ ಕಾರ್ಖಾನೆಗಳನ್ನೇಕೆ ರಾಷ್ಟ್ರೀಕರಣ ಮಾಡಬಾದರು ?

ಶ್ರೀ ಡಿ. ದೇವರಾಜ ಅರಸ್.—ಮಂಗಳೂರಿನಲ್ಲಿ ಈಗ ನಮ್ಮದೇ ಕಾರ್ಖಾನೆ ಸ್ಥಾಪನೆಯಾಗಿದೆ, ಅಲ್ಲಿ ತೀವ್ರವಾಗಿ ತಯಾರಿಸಲು ನೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿದೆ. ರಾಷ್ಟ್ರೀಕರಣ ಮಾಡುವ ವಿಚಾರ ಕೇಂದ್ರ ಸರಕಾರಕ್ಕೆ ಸಂಬಂಧಪಟ್ಟಿದೆ, ನಮಗೆ ಅದು ಸೇರಿಲ್ಲ.

Notice of privilege Motion *Re.* purchase of Begum Mahal by the Bangalore City Corporation

ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸಿಪುರ).—ನಾನು ಒಂದು ಪ್ರಿವಿಲೇಜ್ ಮೋಷನ್ ಕಳಿಸಿದ್ದೆ. ಅವಕಾಶ ಕೊಟ್ಟರೆ ಅದರ ವಿಚಾರವನ್ನು ಈ ಸಭೆಯಲ್ಲಿ ಪ್ರಸ್ತಾಪ ಮಾಡುತ್ತೇನೆ.

ಅಧ್ಯಕ್ಷರು.—ತಾವು ಕೊಟ್ಟಿರುವುದನ್ನು ನಾನು ನೋಡಿ ಮಂತ್ರಿಗಳಿಗೆ ಕಳುಹಿಸಿದ್ದೇನೆ. ಏನಾದರೂ ಹೇಳಬೇಕಾದರೆ ಹೇಳಬಹುದು.

ಶ್ರೀ ಎಚ್. ಡಿ. ದೇವೇಗೌಡ.—ಬೇಗಂ ಮಹಲ್ ಕೊಳ್ಳುವ ವಿಚಾರ ಪ್ರಸ್ತಾಪ ಬಂದಾಗ ಉತ್ತರ ಕೊಡುವಾಗ ಮಂತ್ರಿಗಳು ಆ ವಿಚಾರದಲ್ಲಿ ಕಾರ್ಪೊರೇಷನ್ನಿನಲ್ಲಿ ನಿರ್ಣಯವಾಗಿಲ್ಲ ಎಂದು ಹೇಳಿದರು. ಆದರೆ 19-6-72 ರಲ್ಲಿ ಕಾರ್ಪೊರೇಷನ್ನಿನಲ್ಲಿ ನಿರ್ಣಯವಾಗಿದೆ. 12,13,591 ರೂಪಾಯಿಗಳಿಗೆ ಕೊಳ್ಳಲು ತೀರ್ಮಾನವಾಗಿದೆ. ಮಂತ್ರಿಗಳು ಉತ್ತರ ಕೊಡುವಾಗ ಕಾರ್ಪೊರೇಷನ್ನಿನಲ್ಲಿ ನಿರ್ಣಯವಾಗಿಲ್ಲ, ಚರ್ಚೆಯಾಗಿ ಕೈಬಿಟ್ಟರು ಎಂದು ಹೇಳಿದರು. ನನಗೆ ಗೊತ್ತಿರುವ ರೀತಿಯಲ್ಲಿ ಆ ರೀತಿ ಹೇಳಿದ್ದು ಜ್ಞಾಪಕವಿದೆ. ಅವರು ಈ ಸಭೆಗೆ ತಪ್ಪು ವಿವರಣೆ ಕೊಟ್ಟು ಅಪಘಾತಮಾಡಿದ್ದಾರೆ ಎಂದು ಹೇಳಿದರೆ ಬಹುಶಃ ಅದು ತಪ್ಪಲ್ಲ. ಮಂತ್ರಿಗಳಾಗಿರುವವರು ಈ ಸಭೆಯಲ್ಲಿ ಯಾವುದೇ ಹೇಳಿಕೆ ಕೊಡುವಾಗ ಸತ್ಯಕ್ಕೆ ದೂರವಾದ ಹೇಳಿಕೆ ಕೊಡುವುದು ಸರಿಯಲ್ಲ. ಹಾಗೆ ಮಾಡುವುದು ಸಭಾ ನಿಯಮಗಳಿಗೆ ತಕ್ಕುದಲ್ಲ. ಒಂದು ವೇಳೆ ಅವರ ಹತ್ತಿರ ಪೂರ್ಣವಾದ ಮಾಹಿತಿ ಇಲ್ಲದಿದ್ದರೆ ಅದನ್ನು ತರಿಸಿಕೊಂಡು ಸರಿಯಾದ ಹೇಳಿಕೆ ಕೊಡಬಹುದಾಗಿತ್ತು. ಅವರು ಎಲ್ಲಾ ವಿಷಯ ಗೊತ್ತಿರುವ ಹಾಗೆ ಹೇಳುತ್ತಿದ್ದರು. ನಿಜವಾಗಿಯೂ ಹೇಳಬೇಕಾದರೆ ಕಾರ್ಪೊರೇಷನ್‌ನಲ್ಲಿ ನಿರ್ಣಯವಾಗಿಲ್ಲ, ಮಂತ್ರಿಗಳು ಹೇಳಿರುವುದು ಸತ್ಯಕ್ಕೆ ದೂರವಾದ ವಿಷಯ. ಈ ಸಭೆಯನ್ನು ಅವರು ನಿರ್ಲಕ್ಷಮಾಡಿದ್ದಾರೆಂದರೆ ಅದು ತಪ್ಪಲ್ಲ. ಈ ಸಭೆ ಏನು ಮಾಡುವುದು, ತಪ್ಪು ಹೇಳಿದರೂ ಪರವಾಗಿಲ್ಲ ಎಂದು ಅವರು ತಿಳಿದಿರಬಹುದು. ಆ ಧಾಟಿಯಲ್ಲಿ ಅವರು ಹೇಳಿದ್ದಾರೆ. ಈ ದಿವಸ ನಾನು ನಿರ್ಣಯದ ಕಾಪಿ ಕೊಟ್ಟಿದ್ದೇನೆ. ನಾನು ಸೃಷ್ಟಿಮಾಡಿ ಹೇಳುತ್ತಿಲ್ಲ, ಸರಕಾರಕ್ಕೆ ನಿರ್ಣಯದ ಕಾಪಿ ಕೊಟ್ಟಿದ್ದೇನೆ. ಈ ದಿನ ಈ ಸಭೆಯನ್ನು ನಿರ್ಲಕ್ಷಮಾಡಿ ನಿಯಮಗಳಿಗೆ ವಿರುದ್ಧವಾಗಿ ಸಭೆಯಮುಂದೆ ಹೇಳಿಕೆಕೊಟ್ಟಿದ್ದಾರೆ. ಇದು ಬಹುಶಃ ಈ ಸಭೆಯ ನಿಯಮಾವಳಿ ಏನಿದೆ ಅದಕ್ಕೆ ತದ್ವಿರುದ್ಧವಾಗಿದೆ. ಆದುದರಿಂದ ಅವರು ಹಕ್ಕುಬಾಧ್ಯತೆಯ ಉಲ್ಲಂಘನೆ ಮಾಡಿದ್ದಾರೆ ಎಂಬುದು ನನ್ನ ನಿಷ್ಪಷ್ಟ ಅಭಿಪ್ರಾಯ. ಅವರು ಸುಳ್ಳು ಹೇಳಿದರು ಎಂದರೆ ತಪ್ಪಾಗಬಹುದು, ಫಾಲ್ಸ್ ಸ್ಟೇಟ್‌ಮೆಂಟ್ ಅಥವಾ ಇನ್‌ಕರೆಕ್ಟ್ ಸ್ಟೇಟ್‌ಮೆಂಟ್ ಮಾಡಿದರು ಎಂದು ಹೇಳಬಹುದೆಂದು ಕಾಣುತ್ತದೆ. ಫಾಲ್ಸ್ ಸ್ಟೇಟ್‌ಮೆಂಟ್ ಎಂದು ಹೇಳಿದರೆ ಫೋರ್ಸ್ ಜಾಸ್ತಿ ಇರುವುದೆಂದು ತೋರುವುದು.

(ವಾಟಾಳ್ ನಾಗರಾಜ್‌ರವರು ಮಾತನಾಡಲು ಎದ್ದು ನಿಂತರು)

ಅಧ್ಯಕ್ಷರು.—ಶ್ರೀ ವಾಟಾಳ್ ನಾಗರಾಜರವರು ಕೂತುಕೊಳ್ಳಬೇಕು. ಪ್ರಿವಿಲೇಜ್ ಮೋಷನ್ ತೆಗೆದುಕೊಳ್ಳುವ ಮೊದಲು ಪರ್ಮಿಷನ್ ತೆಗೆದುಕೊಳ್ಳಬೇಕೆಂದು ಶ್ರೀ ದೇವೇಗೌಡರು ಕೆಲವು ವಿಷಯಗಳನ್ನು ಹೇಳುತ್ತಿದ್ದಾರೆ. ಅದಕ್ಕೂ ಮುಂಚೆಯೇ ನೀವು ಮಾತನಾಡುತ್ತೇನೆ ಎಂದು ಹೇಳಿದರೆ ಹೇಗೆ ಆಗುತ್ತದೆ.